**ಓ ಎಸ್ ನಂಃ29/2016**

**ಪಿ. ಡಬ್ಲ್ಯೂ ಃ 1**

**ದಿಃ 01.07.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ ಎ ಎಸ್ ಎಸ್ ವಕೀಲರಿಂದ ಃ**

ನಾನು 7 ನೆ ತರಗತಿ ಪಾಸಾಗಿದ್ದೇನೆ. ಯಾವ ವರ್ಷದಲ್ಲಿ ಪಾಸಾಗಿದ್ದೇನೆ ಎಂದು ನನಗೆ ಗೂತ್ತಿಲ್ಲ. ನನಗೆ ಈಗ 70 ವರ್ಷ ವಯಸ್ಸಾಗಿದೆ. ರೇವಣ್ಣ ನನ್ನ ತಂದೆಯಾಗಬೇಕು. ನಮ್ಮ ತಾತನ ಹೆಸರು ಶಾಂತಯ್ಯ ಇರುತ್ತದೆ. ನಮ್ಮ ತಾತನಿಗೆ ನಮ್ಮ ತಂದೆ ರೇವಣ್ಣ ಒಬ್ಬನೇ ಮಗನಿರುತ್ತಾನೆ. ನಮ್ಮ ತಂದೆಗೆ ಇಬ್ಬರು ಹೆಂಡತಿಯರು ಅವರೆಂದರೆ ನಂಜಮ್ಮ ಮತ್ತು 2 ನೆಯವರು ರೇವಕ್ಕ ಇರುತ್ತಾರೆ. ನಂಜಮ್ಮ ನಿಗೆ ಇವರಿಗೆ ಒಬ್ಬ ಮಗಳಿದ್ದಳು. ರೇವಕ್ಕನಿಗೆ ಇಬ್ಬರು ಗಂಡು ಮಕ್ಕಳು ಅವರೆಂದರೆ ನಾನು ಮತ್ತು ರೇಣುಕಪ್ಪ. ನಂಜಮ್ಮನ ಮಗಳ ಹೆಸರು ಗಂಗಮ್ಮ ಇರುತ್ತದೆ. ಅವರನ್ನು ಹಳೆನಿಜಗಲ್ಲು ಗ್ರಾಮಕ್ಕೆ ಕೊಟ್ಟು ಮದುವೆ ಮಾಡಿದ್ದೇವೆ. ಗಂಗಮ್ಮನಿಗೆ 6 ಜನ ಮಕ್ಕಳಿರುತ್ತಾರೆ. ಅವರೆಂದರೆ ಶಿವರುದ್ರಯ್ಯ, ಸುವರ್ಣಮ್ಮ, ಶಿವಶಂಕರಯ್ಯ, ದ್ರಾಕ್ಷಾಯಣಮ್ಮ , ಭ್ರಮರಾಂಭಿಕೆ ಮತ್ತು ರುದ್ರೇಶಯ್ಯ ಇರುತ್ತಾರೆ. ದ್ರಾಕ್ಷಾಯಣಮ್ಮ ನನ್ನ ಹೆಂಡತಿ ಎಂದರೆ ಸರಿ.

ನಂಜಮ್ಮ ಇವರಿಗೆ ನನ್ನ ಹೆಂಡತಿ ಸೇರಿ 6 ಜನ ಮೊಮ್ಮಕ್ಕಳು ಎಂದರೆ ಸರಿ. ನಮ್ಮ ತಂದೆ ನಂಜಮ್ಮ ಬದುಕಿದ್ದಾಗಲೇ ರೇವಕ್ಕ ಇವರನ್ನು ಮದುವೆ ಆಗಿದ್ದರು. ನಂಜಮ್ಮ ಇವರು ತೀರಿಕೊಂಡು 10 ವರ್ಷವಾಗಿದೆ. ರೇವಕ್ಕ ತೀರಿಕೊಂಡು 8 ವರ್ಷವಾಗಿದೆ. ನಮ್ಮ ತಂದೆ ತೀರಿಕೊಂಡು 15 ವರ್ಷವಾಗಿದೆ. ನಂಜಮ್ಮ ಪಾಲನಹಳ್ಳಿಯಲ್ಲಿ ವಾಸವಾಗಿದ್ದರು. ರೇವಕ್ಕ ನಾನು, ನನ್ನ ತಮ್ಮ ತಟ್ಟೆಕೆರೆಯಲ್ಲಿ ವಾಸವಾಗಿದ್ದೇವು. ನಾವು ತಟ್ಟೆಕೆರೆಯಲ್ಲಿ ವಾಸವಿದ್ದ ಬಗ್ಗೆ ನನ್ನ ಹೆಸರಿನಲ್ಲಿ ಯಾವುದೆ ದಾಖಲೆ ಇಲ್ಲ. ಶಾಲಾ ದಾಖಲಾತಿ ಇದೆ. ತಟ್ಟೆಕೆರೆಯ ಪ್ರಾಥಮಿಕ ಶಾಲೆಯಲ್ಲಿ 1 ರಿಂದ 4 ನೆ ತರಗತಿಯವರೆಗೆ ಓದಿದ್ದೇನೆ. ಮದುವೆಯಾದ ನಂತರ ನಾನು ಖಾಯಂ ಆಗಿ ನನ್ನ ಹೆಂಡತಿ ಮನೆಯಲ್ಲಿ ವಾಸವಾಗಿದ್ದೇನು ಆಗಾಗ ತಟ್ಟೆಕೆರೆಗೆ ಬಂದು ಹೋಗಿ ಮಾಡುತ್ತಿದ್ದೇನು.

ನನ್ನ ಹೆಂಡತಿಯ ಊರು ಪಾಲನಹಳ್ಳಿ ಇರುತ್ತದೆ. ನನ್ನ ಹೆಂಡತಿಯ ಊರು ನಿಜಗಲ್ ಎಂದರೆ ಸರಿ. ಆದರೆ ಅವರ ಅಜ್ಜಿ ನಂಜಮ್ಮ ಆಕೆಯನ್ನು ಸಾಕಿಕೊಂಡಿದ್ದರಿಂದ ಪಾಲನಹಳ್ಳಿಯಲ್ಲಿ ವಾಸವಾಗಿದ್ದರು. ನಮ್ಮ ಅಜ್ಜಿ ನನ್ನ ಹೆಂಡತಿಯನ್ನು ಸಾಕಿಕೊಂಡ ಬಗ್ಗೆ ಯಾವುದೆ ದಾಖಲೆಗಳು ಇಲ್ಲ.

ನನ್ನ ಹೆಂಡತಿ 6 ತಿಂಗಳ ಮಗು ಇದ್ದಾಗಿನಿಂದ ನಂಜಮ್ಮ ಸಾಕಿಕೊಂಡಿದ್ದರು. ನನ್ನ ಹೆಂಡತಿ ಎಸ್ ಎಸ್ ಎಲ್ ಸಿ ವರೆಗೆ ಓದಿದ್ದಾರೆ. ನನ್ನ ಹೆಂಡತಿ ಎಸ್ ಎಸ್ ಎಲ್ ಸಿ ವರೆಗೆ ತುಮಕೂರು ತಾ. ಹಿರೇಹಳ್ಳಿಯಲ್ಲಿ ಓದಿದ್ದಾರೆ. ಆ ಊರು ನಿಜಗಲ್ ಪಕ್ಕದಲ್ಲಿರುತ್ತದೆ ಎಂದರೆ ಸರಿ. ಮೊದಲು ನಿಜಗಲ್ ನಲ್ಲಿ ಶಾಲೆ ಇರಲಿಲ್ಲ ಎಂದರೆ ಸರಿ. ಅದಕ್ಕಾಗಿ ಆ ಊರಿನವರು ಹಿರೇಹಳ್ಳಿಯಲ್ಲಿ ಓದುತ್ತಿದ್ದರು ಎಂದರೆ ಸರಿ. ನನ್ನ ಹೆಂಡತಿ ಓದುತ್ತಿದ್ದ ಶಾಲೆ ಸಿದ್ದಗಂಗ ಮಠದ ಶಾಲೆ ಇರುತ್ತದೆ. ನಾನು ಹೇಳಿದಂತೆ ನನ್ನ ದೊಡ್ಡಮ್ಮ ನನ್ನ ಹೆಂಡತಿಯನ್ನು ಸಾಕಿ ವಿದ್ಯಾಭ್ಯಾಸ ಮಾಡಿಸಿಲ್ಲ ಎಂದರೆ ಸರಿಯಲ್ಲ. 6 ವರ್ಷದ ವರೆಗೆ ಸಾಕಿದ್ದಾರೆ. ವಿದ್ಯಾಭ್ಯಾಸಕ್ಕಾಗಿ ಹಿರೇಹಳ್ಳಿಗೆ ಹೋಗಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ.

ನನ್ನ ಹೆಂಡತಿ 18 ವರ್ಷ ವಯಸ್ಸು ಇದ್ದಾಗ ನಾನು ಆಕೆಯನ್ನು ಮದುವೆ ಆಗಿದ್ದೇನೆ. ನಾನು ಮದುವೆಯಾದಾಗ ನನ್ನ ಹೆಂಡತಿ ನಿಜಗಲ್ ನಲ್ಲಿ ವಾಸವಾಗಿದ್ದರು ಎಂದರೆ ಸರಿ. ಮದುವೆಯಾದ ನಂತರ ನನ್ನ ಜೊತೆ ಪಾಲನಹಳ್ಳಿ ಗ್ರಾಮದಲ್ಲಿ ವಾಸವಿದ್ದರು ಎಂದರೆ ಸರಿ. ನಾನು ಈಗ ವಾಸವಿರುವ ಪಾಲನಹಳ್ಳಿ ಮನೆ ನಮ್ಮ ತಾತ ವಾಸವಿದ್ದ ಮನೆ ಎಂದರೆ ಸರಿ. ಆ ಮನೆಯ ದಾಖಲೆ ನನ್ನ ತಂದೆ ರೇವಣ್ಣ ಇವರ ಹೆಸರಿನಲ್ಲಿದೆ. ಶಾಂತಯ್ಯ ಇವರಿಂದ ನಮ್ಮ ತಂದೆಗೆ 10 ಎಕರೆ ಜಮೀನು ಬಂದಿತ್ತು. ಸ.ನಂ. 7/2 ರಲ್ಲಿ 1 ಎಕರೆ 2 ಗುಂಟೆ, ಸ.ನಂ. 23/2 ರಲ್ಲಿ 16 ಗುಂಟೆ, ಸ.ನಂ. 26/2 ರಲ್ಲಿ 1 ಎಕರೆ 29 ಗುಂಟೆ, ಸ.ನಂ. 101 ರಲ್ಲಿ 5 ಎಕರೆ 38 ಗುಂಟೆ ಸ.ನಂ. 78/2 ರಲ್ಲಿ 12 ಗುಂಟೆ, ಸ.ನಂ. 84/2 ರಲ್ಲಿ 16 ಗುಂಟೆ ಇವುಗಳು ನಮ್ಮ ತಂದೆಗೆ ಬಂದಿದ್ದವು. ಇವುಗಳು ಪಿತ್ರಾರ್ಜಿತ ಆಸ್ತಿಗಳೆಂದರೆ ಸರಿ.

ವಂಶವೃಕ್ಷದಲ್ಲಿ ನಂಜಮ್ಮನ ಹೆಸರು ಬರೆಸಿಲ್ಲ ಎಂದರೆ ಸರಿ. ನಂಜಮ್ಮನಿಗೆ ನಮ್ಮ ತಂದೆ ಈಗಾಗಲೇ ಪಿತ್ರಾರ್ಜಿತ ಸ್ವತ್ತುಗಳನ್ನು ಕೊಟ್ಟಿದ್ದರಿಂದ ಅವರ ಹೆಸರನ್ನು ವಂಶವೃಕ್ಷದಲ್ಲಿ ಬರೆಸಿಲ್ಲ. ನಂಜಮ್ಮನಿಗೆ ಆಸ್ತಿ ಕೊಟ್ಟಿದ್ದನ್ನು ದಾವೆಯಲ್ಲಿ ಬರೆಸಿಲ್ಲ ಎಂದರೆ ಸರಿ. ಓ ಎಸ್ 94/2016 ನ್ನು ಪ್ರತಿವಾದಿಗಳು ಹಾಕಿದ ನಂತರ ನಾನು ವಾದಪತ್ರವನ್ನು ತಿದ್ದುಪಡಿ ಮಾಡಿಕೊಂಡು ನಂಜಮ್ಮನಿಗೆ ನಮ್ಮ ತಂದೆ ಆಸ್ತಿ ಕೊಟ್ಟಿದ್ದರು ಎಂದು ಬರೆಯಿಸಿದ್ದೇನೆ. ಓ ಎಸ್ 94/2016 ಇದನ್ನು ಏನು ಪರಿಹಾರ ಕೇಳಿ ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಕರಾರಿನಲ್ಲಿ ನನ್ನ ತಂದೆಯ ಹಿರಿಯ ಹೆಂಡತಿ ಮತ್ತು ಚಿಕ್ಕ ಹೆಂಡತಿ ಮಧ್ಯೆ ಆಸ್ತಿಗಳ ಭಾಗ ಆಗಿದೆ ಎಂದು ಬರೆಯಿಸಿದ್ದೇನೆ. ರೇಣುಕಪ್ಪ, ರೇವಕ್ಕ ಮತ್ತು ರೇವಣ್ಣ ಮದುವೆಯಾದ ನಂತರ ಪ್ರತಿವಾದಿಗಳು ತಟ್ಟೆಕೆರೆಯಲ್ಲಿ ವಾಸವಾಗಿದ್ದರು ಎಂದರೆ ಸರಿ. ತಟ್ಟೆಕೆರೆಯಲ್ಲಿ ವಾಸವಿದ್ದ ಸಮಯದಲ್ಲಿ ರೇಣುಕಪ್ಪ ದಾವಾ ಸ್ವತ್ತುಗಳನ್ನು ವ್ಯವಸಾಯ ಮಾಡಿಕೊಂಡು ಬರುತ್ತಿದ್ದರು ಎಂದರೆ ಸರಿಯಲ್ಲ. ನಾನು ಸ್ವಲ್ಪ

ಮಾಡುತ್ತಿದ್ದೇನು ಎಂದು ಸಾಕ್ಷಿ ಹೇಳುತ್ತಾರೆ.

ಪಾಲನಹಳ್ಳಿಯಲ್ಲಿರುವ ಸ್ವತ್ತುಗಳಲ್ಲಿ ನಾನು, ನಂಜಮ್ಮ, ನನ್ನ ತಂದೆ ವ್ಯವಸಾಯ ಮಾಡಿಕೊಂಡಿದ್ದೇವು ಎಂದರೆ ಸರಿ. ನಮ್ಮ ತಂದೆ ಬದುಕಿದ್ದಾಗಲೇ ತಟ್ಟೆಕೆರೆಯಲ್ಲಿದ್ದ ಸ್ವತ್ತುಗಳನ್ನು ರೇವಕ್ಕ ಮತ್ತು ರೇಣುಕಪ್ಪ ಮತ್ತು ಪಾಲನಹಳ್ಳಿಯಲ್ಲಿ ಇದ್ದ ಸ್ವತ್ತುಗಳನ್ನು ನಂಜಮ್ಮ, ನಾನು ಮತ್ತು ನನ್ನ ಹೆಂಡತಿ ಅನುಭವಿಸಿಕೂಂಡು ಹೋಗಬೇಕೆಂದು ತೀರ್ಮಾನ ಮಾಡಿದ್ದರು ಎಂದರೆ ಸರಿಯಲ್ಲ. ನಮ್ಮ ತಂದೆ ತೀರ್ಮಾನದ ಪ್ರಕಾರ ನಾನು ಪಾಲನಹಳ್ಳಿಯ ಸ್ವತ್ತುಗಳನ್ನು ಅನುಭವಿಸಿಕೊಂಡು ಅಲ್ಲಿಯೇ ವಾಸವಾಗಿದ್ದೇನು ಎಂದರೆ ಸರಿಯಲ್ಲ. ರೇಣುಕಪ್ಪ ಮತ್ತು ಪ್ರತಿವಾದಿಗಳು ಮೊದಲಿನಿಂದಲೂ ತಟ್ಟೆಕೆರೆಯಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ರೇವಕ್ಕ ಮತ್ತು ರೇಣುಕಪ್ಪ ತೀರಿಕೊಂಡು ನಂತರ ಪ್ರತಿವಾದಿಗಳು ತಟ್ಟೆಕೆರೆಯಲ್ಲಿದ್ದ ವಾಸದ ಮನೆಗಳನ್ನು ನವೀಕರಿಸಿಕೊಂಡು ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿ. ಓ ಎಸ್ 94/2016 ನ್ನು ಪ್ರತಿವಾದಿಗಳು ಹಾಕಿದ ನಂತರ ನಿ ಪಿ 19 ನ್ನು ನಾನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಿ ಪಿ 19 ನಂಜಮ್ಮ ಬಳಿ ಇದ್ದುದ್ದರಿಂದ ಮತ್ತು ಪ್ರತಿವಾದಿಗಳು ಎರಡೂ ಊರಿನಲ್ಲಿರುವ ಸ್ವತ್ತುಗಳನ್ನು ಸೇರಿಸಿ ದಾವೆ ಮಾಡಿದ್ದರಿಂದ ನಂತರ ಅದನ್ನು ಹುಡುಕಾಡಿ ತೆಗೆದುಕೊಂಡು ಬಂದು ಹಾಜರುಪಡಿಸಿದ್ದೇನೆ. ಆ ಪತ್ರ ನಮ್ಮ ಅಕ್ಕ ಗಂಗಮ್ಮನ ಬಳಿ ಇತ್ತು. ಆ ಪತ್ರ ಗಂಗಮ್ಮನ ಸ್ವಾಧೀನದಲ್ಲಿತ್ತು. ಪತ್ರ ಗಂಗಮ್ಮ ನ ಬಳಿ ಇತ್ತು, ಅದು ಇತ್ತೀಚೆಗೆ ಸಿಕ್ಕಿತು ಎಂದು ವಾದಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿ ಹೇಳಿಲ್ಲ. ದಾವಾ ಹಾಕುವ ಸಮಯದಲ್ಲಿ ನಿ ಪಿ 19 ರ ದಾಖಲೆಯಾಗಿತ್ತು ಎಂದು ಅದು ನನ್ನ ಬಳಿ ಲಭ್ಯ ಇಲ್ಲ ಎಂದು ಬರೆಸಿಲ್ಲ.

ದಾವೆ ಸಲ್ಲಿಸುವ ಸಮಯದಲ್ಲಿ ನಾನು ಬಾಯಿಮಾತಿನ ಮೂಲಕ ವಿಭಾಗ ಆಗಿದೆ ಎಂದು ಬರೆಯಿಸಿದ್ದೇನೆ ಎಂದರೆ ಸರಿಯಲ್ಲ. ರೇವಕ್ಕ, ರೇವಣ್ಣ ಮತ್ತು ನಂಜಮ್ಮನ ಹೆಬ್ಬೆಟ್ಟು ಇದ್ದ ಬೇರೆ ದಾಖಲೆಗಳು ನನ್ನ ಬಳಿ ಇಲ್ಲ. ರೇವಕ್ಕ ಮತ್ತು ರೇವಣ್ಣ ಸಹಿ ಮಾಡಿದ ಬಗ್ಗೆ ಅದೇ ರೀತಿ ಇರುವ ಬೇರೆ ದಾಖಲೆಗಳು ನನ್ನ ಬಳಿ ಇಲ್ಲ. ಈ ವಿಷಯವನ್ನು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರೇವಕ್ಕ ಮತ್ತು ರೇವಣ್ಣ ಇವರ ಸಹಿ ಇರುವ ಇತರೇ ದಾಖಲೆಗಳು ಸಿಕ್ಕರೆ ಅದನ್ನು ನಿ ಪಿ 19 ರ ಜೊತೆ ಹೊಂದಾಣಿಕೆ ಮಾಡಿ ನೋಡಲು ನನ್ನ ಯಾವುದೆ ಅಭ್ಯಂತರ ಇಲ್ಲ. ರೇವಕ್ಕ ಮತ್ತು ರೇಣುಕಪ್ಪ ತೀರಿಕೊಂಡ ನಂತರ ತಟ್ಟೆಕೆರಯಲ್ಲಿ ಇರುವ ಸ್ವತ್ತುಗಳು 1 ನೆ ಪ್ರತಿವಾದಿಯ ಹೆಸರಿನಲ್ಲಿ ಖಾತೆಯಾಗಿವೆ ಎಂದರೆ ಸರಿ. ಆ ಖಾತೆಯಾಗಿದ್ದನ್ನು ನಾನು ಪ್ರಶ್ನಿಸಿಲ್ಲ. ಆ ಖಾತೆ ಮಾಡಿರುವುದು ಕಾನೂನುಬದ್ದವಾಗಿದ್ದರಿಂದ ಮತ್ತು ಆ ಸ್ವತ್ತುಗಳು ಅವರಿಗೆ ಸೇರಬೇಕಾಗಿದ್ದರಿಂದ ನಾನು ಅದನ್ನು ಪ್ರಶ್ನೆ ಮಾಡಿಲ್ಲ ಎಂದರೆ ಸರಿಯಲ್ಲ.

ನಿ ಪಿ 19 ನ್ನು ಸೃಷ್ಟಿ ಮಾಡಿಕೊಂಡು ಅದರ ಆಧಾರದ ಮೇಲೆ ಪಾಲನಹಳ್ಳಿ ಇರುವ ಸ್ವತ್ತುಗಳನ್ನು ನನ್ನ ಹೆಂಡತಿ ಹೆಸರಿಗೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ನನಗೆ ಯಾವುದೆ ಹಕ್ಕು ನಿವೃತ್ತಿ ಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿ. ರೇವಣ್ಣ ಇವರ ದೊಡ್ಡ ಹೆಂಡತಿಯ ಮೊಮ್ಮಕ್ಕಳು ನನ್ನ ಹೆಂಡತಿಯ ಹೆಸರಿನಲ್ಲಿ ಹಕ್ಕು ನಿವೃತ್ತಿ ಪತ್ರ ಬರೆದುಕೊಟ್ಟಿದ್ದಾರೆ. ದಾವಾ ಆಸ್ತಿಯಲ್ಲಿ ನಾನು ಜಂಟಿ ಸ್ವಾಧೀನದಲ್ಲಿ ಇಲ್ಲ ಮತ್ತು ಆ ಸ್ವತ್ತುಗಳಲ್ಲಿ ನನಗೆ ಯಾವುದೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಆ ಬಗ್ಗೆ ನನ್ನ ಬಳಿ ಯಾವುದೆ ದಾಖಲೆಗಳು ಇಲ್ಲ. ಪ್ರತಿವಾದಿಗಳಿಂದ ತಟ್ಟೆಕೆರೆಯಲ್ಲಿ ಇರುವ ಆಸ್ತಿಗಳನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗಾಗಿ ಎ ಎಸ್ ಎಸ್ ವಕೀಲರು ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**